ಗೆಣೆಕಾರ್ನೋ ಇರ್ಲಿ ಇರ್ಲಿ ನಾಳಿಕೆಲ್ಲ ತೀರ್ಮಾನ ಆಯ್ತದೆ' ಅಂದುಕೊಳ್ಳುತ್ತ ತೂರಾಡಿ ಬೀದಿಗಿಳಿದರು. ಆಸರೆಗಾಗಿ ಹಾದಿ ಬದಿಯ ಗಾಡಿ, ಜಗಲಿಕಂಭ ಗೋಡೆ ಏನು ಸಿಕ್ಕರೆ ಅದನ್ನು ಹಿಡಿದುಕೊಳ್ಳುತ್ತ ಪ್ರಯಾಸದ ಹೆಜ್ಜೆಯ ಮೇಲೆ ನಡೆದರು.

ಅವರು ಅತ್ತ ಅರುಗಾದ ಮೇಲೆ ನಾನು ಗುಡಿಸಿಲ ಒಳಗಾದೆ. ಒಬ್ಬ ತೊಲಗಿದ ಮೇಲೆ ತಿರುಗಿ ವಕ್ಕರಿಸಿದ ಶನಿ ಯಾವುದಿರಬಹುದೆಂಬಂತೆ ಮಾದೇವಿ ಕತ್ತೆತ್ತಿ ನೋಡಿದಳು. ಅವಳ ಮುಖ ಸ್ವಲ್ಪ ವ್ಯಗ್ರತೆಯಿಂದಿತ್ತು. ಭಯವೇನೂ ಇದ್ದಂತಿರಲಿಲ್ಲ. ನಾನು 'ಮಾದೇವಿ' ಎಂದು ಮುಂದೇನು ಆಡುವುದೆಂದು ಗೊತ್ತಾಗದೆ ಅಷ್ಟಕ್ಕೇ ಸುಮ್ಮನಾದೆ. ಚೆನ್ನಾಗಿರುವೆಯಾ ಅಂದರೆ ಅಣಕಿಸಿದಂತೆ, ಹೇಗಿರುವೆ ಎಂದರೆ ಕಣ್ಣಿಲ್ಲವೆಂತಲೂ ಆಗಬಹುದೆನಿಸಿ ಅವಳ ಹೆಸರಿನ ಉಚ್ಚಾರಣೆಗೇ ನನ್ನ ಮಾತು ನಿಂತಿತು. ಮಾದೇವಿ ನನ್ನ ಮುಖವನ್ನು ಗುರುತಿಸುವುದಕ್ಕಿಂತ ಮೊದಲು ಧ್ವನಿಯಲ್ಲೇ ಹಿಡಿದುಬಿಟ್ಟವಳಂತೆ 'ಕಿಟ್ಟಣ್ಣಾ' ಅಂದಳು. ಅವಳ ಧ್ವನಿಯಲ್ಲಿ ದೈನ್ಯತೆಯೂ, ಎಷ್ಟೋ ದಿನಗಳ ಸ್ನೇಹವೋ, ವಿಶ್ವಾಸವೂ ಇತ್ತು. ಅಡ್ಡಗೋಡೆಯ ಕ್ಷೀಣವಾಗುತ್ತಿದ್ದ ದೀವಿಗೆಯ ಬತ್ತಿಯನ್ನು ಮುಂದೆ ಎಳೆದು ಎಣ್ಣೆ ಹಾಕಿದಳು. ಹೆಚ್ಚಿದ ಬೆಳಕಲ್ಲಿ ನನ್ನ ನೋಡಿ 'ಯಾವಾಗ ಬಂದೆ' ಅಂದಳು. ಅಷ್ಟು ಹೊತ್ತಿಗೆ ದುಃಖ ಭಾರದಿಂದಿದ್ದವಳ ಮುಖ ಚಹರೆ ಬದಲಾಗಿ ಸ್ವಲ್ಪ ಹಗುರಗೊಂಡವಳಂತೆ ಕಂಡಳು. ಅವಳು ಕೇಳಿದ್ದಕ್ಕೆ 'ಸಾಯಂಕಾಲ' ಅಂದು, ಅವಳೇನಾದರೂ ಸುದ್ದಿ ಎತ್ತಬಹುದೇ ಎಂದು ಒಂದು ಘಳಿಗೆ ಸುಮ್ಮನೆ ಕೂತೆ.

'ನೀನು ಸೌಖ್ಯವಾ' ಅಂದು ಕೇಳಿದಳು.

ನಿಜವಾಗಿಯೂ ಮಾದೇವಿಗೆ ನಾನೆಲ್ಲಿ ಯಾವ ಉದ್ಯೋಗದಲ್ಲಿದ್ದೇನೆ ಎಂಬುದು ಗೊತ್ತಿರದೆ, ಅಂತೂ ಯಾವುದೋ ಪರಸ್ಥಳದಲ್ಲಿ ಕೆಲಸದ ಮೇಲಿದ್ದು ಆಗಾಗ್ಗೆ ಊರಿಗೆ ಬಂದು ಹೋಗುತ್ತಿರುವೆ ಎಂದಷ್ಟೇ ತಿಳಿದಂತಿತ್ತು. ಹೀಗಾಗಿ 'ನೀನು ಸೌಖ್ಯವಾ' ಎಂದು ಕೇಳಿದವಳು ತಿರುಗಿ 'ಏನು ಸೌಖ್ಯ ಬಂತು, ಅಲ್ಲಿ ನಿಂಗೆ ಬೇಯ್ಸಿ ಹಾಕೋರು ಯಾರು, ಕಿಟ್ಟಣ್ಣ ನೀನು ಬ್ಯಾಗನೆ ಲಗ್ನ ಆಗು' ಅಂದಳು.

ನನ್ನಷ್ಟೇ ವಯಸ್ಸಾಗಿದ್ದ ಇವಳಿಗೆ ಇನ್ನೂ ಮಕ್ಕಳಾಗದಿದ್ದರೂ ತಾಯ್ತನ ಯಾವಾಗ ಬಂತು ಅನ್ನಿಸಿ ನಗು ಬಂತು. 'ಅದಿರ್ಲಿ ನೀ ಹೆಂಗಿದ್ದೀಯ ಹೇಳು' ಅಂದೆ. ಒಂದು ಗಳಿಗೆ ಅತ್ತ ಇತ್ತ ಮೇಲೆ ಕೆಳಗೆ ಏನೋ ನೋಡಿ ಪ್ರಶ್ನೆ ತಪ್ಪಿಸುವವಳಂತೆ ಮಾಡಿದಳು. ಅಳು ತಡೆಯಲಾಗದೆ ಎದ್ದು ಗೋಡೆ ಆಚೆಹೋದಳು. ಆ ಮುಂದಿನ ಕ್ಷಣ ಸೌದೆ ಕಡ್ಡಿ ಮುರಿಯುವುದು, ಬೆಂಕಿ ಹಚ್ಚುವುದು, ಪಾತ್ರೆ ತೊಳೆದು ನೀರು ಸುರಿಯುವುದು ಇದೆಲ್ಲ ಕೇಳಿಸಿತು.

ಎಷ್ಟೋ ಹೊತ್ತಿನ ಮೇಲೆ ಒಂದು ಲೋಟ ತಂದು ನನ್ನ ಮುಂದೆ ಇಡುತ್ತಾ 'ಕಿಟ್ಟಣ್ಣಾ ನೀನು ಹಳ್ಳಿ ಪಳ್ಳಿ ಸಮ್ಮಂದ ಅಂತ ಇತ್ಲಕಡೆ ಬಂದು ಲಗ್ನಾ ಆಗಬ್ಯಾಡಪ್ಪ, ಅತ್ಲಕಡೆ ಪ್ಯಾಟೆ ಹುಡುಗಿನೆ ನೋಡು' ಅಂದಳು. ನಾನು ಮಾತಿಲ್ಲದೆ ಟೀ ಕುಡಿದೆ. ಮಾದೇವಿಗೆ ನಾನು ಅವಳು ಮಾಡಿ ತಂದಿಟ್ಟ ಟೀ ಕುಡಿಯುತ್ತಿರುವುದು ಭಾರಿ ಸಮಾಧಾನದ ಸಂಗತಿಯಾಗಿ ಕಂಡಿತು.

'ಮಾದೇವಿ ನಿಂದು ಊಟ ಆಯ್ತ' ಎಂದೆ.

'ಇನ್ನೇನು ನೀ ಬಂದ್ಯಲ್ಲ ಮಾಡ್ತೀನಿ' ಅಂದಳು.

ನಾನು ನಕ್ಕೆ, ಮತ್ತೆ ಅವಳು ಚಿಕ್ಕಂದು ಆಡುತ್ತಿದ್ದ 'ಕಿಟ್ಟಣ್ಣ ನನ್ನ ಎತ್ಕಂಡೋಗಿ ಯಾವ್ದಾರ ಗಂಡು ಕರಡಿಯ ಕೈಗೆ ಕೊಟ್ಟಿಡು ಮತ್ತೆ ಅಲ್ಲಾರ ಸಂಸಾರ ಮಾಡ್ಕಂಡು ಇರ್ತೀನಿ' ಅಂದು ನಕ್ಕಳು.

'ಅದ್ಸರಿ ಪಂಚಾಯ್ತಿ ಕಟ್ಟೇಲಿ ಚಿರತೆ ಬಯಲ ಗಿರಿಯನ ಸಂಬಂಧ ನೀನು ಮಾಡಿದ್ದುಂಟು